ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.4357/2022

| | | | |
|---|---|---|---|
| ಹೆಸರು | : | ಮುತ್ತುರಾಜು ಜೆ. | ಸಿ .ಡಬ್ಲ್ಯೂ :14 |
| ತಂದೆ ಹೆಸರು | : | ಜಯಣ್ಣ | ಪಿ .ಡಬ್ಲ್ಯೂ :8 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | PSI Gudibande Station, | |
| ವಾಸಸ್ಥಳ | : | Gudibande | |

ಸಾಕ್ಷಿಯನ್ನು ದಿಃ 16-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 28-06-2022 ರಿಂದ 28-07-2023 ರವರೆಗೆ ಗುಬ್ಬಿ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 03-09-2022 ರಂದು ನಾನು ಠಾಣಾ ಪ್ರಭಾರದಲ್ಲಿದಾಗ ಮಧ್ಯಾಹ್ನ 2.00 ಗಂಟೆಯಲ್ಲಿ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 210/2022 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ -3 ರವರು ತೋರಿಸಿದ ಸ್ಥಳದಲ್ಲಿ ಚಾಸಾ -8 ಮತ್ತು 9 ರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 3.00 ರಿಂದ 4.00 ರವರೆಗೆ ಗಂಟೆಯವರೆಗೆ ನಿಪಿ -2 ರಂತೆ ಸ್ಥಳ ಪಂಚನಾಮೆಯನ್ನು ನಡೆಸಿರುತ್ತೇನೆ. ಆ ಸಮಯ ಸ್ಥಳದಲ್ಲಿ ಇದ್ದ ಮೋಟರ್ ಬೈಕ್ ನ್ನು ವಶಕ್ಕೆ ಪಡೆದಿದ್ದೇನೆ . . ಅದೇ ದಿನ ಚಾಸಾ -3 ಮತ್ತು 4 ರವರ ಹೇಳಿಕೆ ಪಡೆದಿದ್ದೇನೆ .

ದಿಃ 05-09-2022 ರಂದು ಚಾಸಾ -6 ರವರು KA-06-F-0826 ಸಂಖ್ಯೆಯ KSRTC ಬಸ್ಸನ್ನು ಠಾಣೆಗೆ ತಂದು ಹಾಜರುಪಡಿಸಿದ್ದು ಚಾಸಾ -10 ಮತ್ತು 11 ರವರ ಸಮಕ್ಷಮ ಮಧ್ಯಾಹ್ನ 12.00 ರಿಂದ 12.45 ರವರೆಗೆ ನಿಪಿ -3 ರಂತೆ ಅಮಾನತ್ತು ಪಂಚನಾಮೆ ಕ್ರಮ ಜರುಗಿಸಿದ್ದೇನೆ .

ಅದೇ ದಿನ ಚಾಸಾ-5 ರವರ ಹೇಳಿಕೆ ಪಡೆದಿದ್ದೇನೆ .

ಅದೇ ದಿನ ಆರೋಪಿತರ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೂಲಕ ಬಿಡುಗಡೆ ಮಾಡಿದ್ದೇನೆ . ಚಾಸಾ -6 ರವರಿಗೆ ಐಎಂವಿ ಕಾಯ್ದೆ 133 ರಡಿಯಲ್ಲಿ ನೋಟಿಸ್ ಜಾರಿಗೊಳಿಸಿ ವಾಹನದ ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ . ಅದೇ ದಿನ ಅವರಿಂದ ನಷ್ಟ ಭರ್ತಿ ಪರಿಹಾರ ಪತ್ರವನ್ನು ಪಡೆದು ವಾಹನವನ್ನು ಅವರ ವಶಕ್ಕೆ

ನೀಡಿದ್ದೇನೆ . ಅದೇ ದಿನ ಚಾಸಾ -12 ರವರಿಗೆ ವಾಹನ ತಪಾಸಣೆಗಾಗಿ ಕೋರಿ ಮನವಿ ಪತ್ರ ಸಲ್ಲಿಸಿಕೊಂಡಿದ್ದೇನೆ .

ದಿಃ 05-09-2022 ರಂದು ಚಾಸಾ -12 ರವರಿಂದ ವಾಹನ ತಪಾಸಣೆ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ .

ದಿಃ 08-09-2022 ರಂದು ಚಾಸಾ -2 ರವರ ಹೇಳಿಕೆ ಪಡೆದಿದ್ದೇನೆ .

ದಿಃ 05-10-2022 ರಂದು ಚಾಸಾ -2 ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ತುಮಕೂರು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿಕೊಂಡಿದ್ದೇನೆ .

ದಿಃ 24-10-2022 ರಂದು ಚಾಸಾ -2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ.

ಅದೇ ದಿನ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ .

ನಿಪಿ -1,2 ಮತ್ತು 5 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 (ಬಿ ) ನಿಪಿ -2 (ಬಿ) ಮತ್ತು ನಿಪಿ -5 (ಬಿ)ಎಂದು ಗುರುತಿಸಲಾಯಿತು .

ಐಎಂವಿ ಕಾಯ್ದೆ ಕಲಂ 133 ರಡಿಯಲ್ಲಿ ನೀಡಿದ ನೋಟಿಸ್ ?ಮತ್ತು ಪ್ರತ್ಯುತ್ತರ , ನಷ್ಟ ಭರ್ತಿ ಪರಿಹಾರ ಪತ್ರ , ಐ ಎಂ ವಿ ವರದಿ , ಆರೋಪಿತರ ಹಾಜರಾತಿ ದೃಢೀಕರಣ ಪತ್ರವನ್ನು ನಿಪಿ -6 ರಿಂದ 10 ಎಂದು , ಸಾಕ್ಷಿಯ ಸಹಿಗಳನ್ನು ನಿಪಿ -6(ಎ) ರಿಂದ 9 (ಎ) ಎಂದು ಗುರುತಿಸಲಾಯಿತು .

ಬಸ್ಸಿಗೆ ಸಂಬಂಧಿಸಿದ 5 ಛಾಯ ಚಿತ್ರಗಳು ಮತ್ತು ದದ್ವಿ ಚಕ್ರ ವಾಹನಕ್ಕೆ ಸಂಬಂಧಿಸಿದ 3 ಛಾಯಚಿತ್ರಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು (ಭಾರತ ಸಾಕ್ಷ್ಯ ಅಧಿನಿಯಮ ಕಲಂ 65 (ಬಿ) ರಡಿಯಲ್ಲಿ ಪ್ರಮಾಣ ಪತ್ರವನ್ನು ಸೂಕ್ತ ರೀತಿಯಲ್ಲಿ ಸಲ್ಲಿಸಿಲ್ಲದ ಕಾರಣ ಛಾಯಾಚಿತ್ರಗಳನ್ನು ನಿಶಾನೆಗಳಾಗಿ ಗುರುತಿಸಿಲ್ಲ) .

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ

<u>ಪಾಟೀಸವಾಲು: ಆರೋಪಿತರ ಪರವಾಗಿ ಶ್ರೀ ಕೆ ಸಿ ಎನ್ ವಕೀಲರಿಂದಃ</u>-

ಈ ಪ್ರಕರಣ ದಾಖಲಿಸುವ ಮೊದಲು SH 84 ರಸ್ತೆಯನ್ನು ನೋಡಿದ್ದೇನೆ . ಗೋಪಾಲಪುರ ವೃತ್ತದ ಸಮೀಪ 10 ವಾಸದ ಮನೆಗಳು 4 ಅಂಗಡಿ ಮಳಿಗೆಗಳು , ಒಂದು ಬಾರ್ಬರ್ ಶಾಪ್ ಇರುತ್ತದೆ ಎಂದರೆ ಸಾಕ್ಷಿಯು ನಾನು ನೋಡಿದಾಗ 4 ಮನೆಗಳಿದ್ದವು ಈಗ ಅಭಿವೃದ್ಧಿ ಹೊಂದಿರಬಹುದು ಎಂದು ತಿಳಿಸಿದ್ದಾರೆ . ಗೋಪಾಲಪುರ ಗ್ರಾಮದಿಂದ

ರಾಜ್ಯ ಹೆದ್ದಾರಿಗೆ ಸೇರುವ ರಸ್ತೆಯಲ್ಲಿ ಗೋಪಾಲಪುರ ಗೇಟ್ ಗಿಂತ ಮೊದಲು ರಸ್ತೆಯ ಡುಬ್ಬವನ್ನು ನಿರ್ಮಿಸಲಾಗಿದೆ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ ಎಂದು ತಿಳಿಸಿದ್ದಾರೆ . ದಿಃ 03-09-2022 ಕ್ಕಿಂತ ಮೊದಲು ಆಸ್ಪತ್ರೆಯಿಂದ ಅಪಘಾತ ಬಗ್ಗೆ ಮಾಹಿತಿ ಬಂದಿತ್ತೇ ಎಂದರೆ ಸಾಕ್ಷಿಯು ಯಾರೋ ಸಾರ್ವಜನಿಕರು ಕರೆ ಮಾಡಿ ತಿಳಿಸಿದ್ದು ಆ ನಂತರ ಸ್ಥಳಕ್ಕೆ ಹೋಗಿದ್ದೆವು ಎಂದು ತಿಳಿಸಿದ್ದಾರೆ . ಸಾರ್ವಜನಿಕರು ಮಾಹಿತಿ ನೀಡಿದ ದಿನ ದೂರು ದಾಖಲಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಅಪಘಾತಕ್ಕೆ ಒಳಗಾದ ವ್ಯಕ್ತಿಯ ಕುಟುಂಬದವರು ಆಸ್ಪತ್ರೆಯಲ್ಲಿ ಇದ್ದರು ದೂರು ನೀಡಲು ಯಾರು ಇರಲಿಲ್ಲ ಆದುದರಿಂದ ದಾಖಲಿಸಿಕೊಂಡಿಲ್ಲ ಎಂದು ತಿಳಿಸಿದ್ದಾರೆ .

ಸ್ಥಳ ಪಂಚನಾಮೆ ಮತ್ತು ಅಂತಿಮ ವರದಿಯ ವಿವರಗಳನ್ನು ಸೂಕ್ಷವಾಗಿ ಪರಿಶೀಲಿಸಿದ್ದೇನೆ . ಅಪಘಾತ ಸ್ಥಳವನ್ನು ಪ್ರತ್ಯಕ್ಷ ಸಾಕ್ಷಿ ವೆಂಕಟಪ್ಪ ರವರು ತೋರಿಸಿದ್ದಾರೆ . ಸ್ಥಳ ಮಹಜರ್ ನಲ್ಲಿ ಸದರಿ ವೆಂಕಟಪ್ಪ ರವರ ಸಹಿ ಇರುವುದಿಲ್ಲ ಎಂದರೆ ಸರಿ . ನಾನು ಅಪಘಾತ ಸ್ಥಳಕ್ಕೆ ಭೇಟಿ ನೀಡಿಲ್ಲ , ಪ್ರಕರಣಕ್ಕೆ ಪೂರಕವಾಗಿ ಠಾಣೆಯಲ್ಲಿ ಕುಳಿತು ಪಂಚನಾಮೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಅಪಘಾತ ಸ್ಥಳದಲ್ಲಿ ಛಾಯಾ ಚಿತ್ರ ಗಳನ್ನು ತೆಗೆದಿಲ್ಲ . ನಿಪಿ -2 ರಲ್ಲಿ KSRTC ಬಸ್ಸಿನ ಮುಂಭಾಗದ ರೇಡಿಯಮ್ ಸ್ಟಿಕ್ಕರ್ ಮುರಿದು ಬಿದ್ದಿತ್ತು ಎಂದು ತಿಳಿಸಲಾಗಿದ್ದು ಅದನ್ನು ವಶಕ್ಕೆ ಪಡೆದುಕೊಂಡಿಲ್ಲ . ಅಪಘಾತದ ಸ್ಥಳಕ್ಕೆ ಭೇಟಿ ನೀಡಿಲ್ಲದ ಕಾರಣ ಮೇಲೆ ಹೇಳಿದಂತೆ ಛಾಯಾ ಚಿತ್ರ ಗಳನ್ನು ತೆಗೆದಿಲ್ಲ ಮತ್ತು KSRTC ಬಸ್ಸಿನ ಮುಂಭಾಗದ ರೇಡಿಯಮ್ ಸ್ಟಿಕ್ಕರ್ ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ .

ಅಂತಿಮ ವರದಿಯಲ್ಲಿ ಈ ಪ್ರಕರಣದ ಅಪಘಾತವು ಬೆಳಗ್ಗೆ 7.00 ಗಂಟೆಗೆ ನಡೆದಿದೆ ಎಂದು ತಿಳಿಸಿದ್ದೇವೆ . ಹೊಸಹಳ್ಳಿ ಕ್ರಾಸ್ ನಿಂದ ಗೋಪಾಲಪುರ ಗೇಟ್ 3 ರಿಂದ ಮೂರುವರೆ ಕಿಲೋ ಮೀಟರ್ ಅಂತರದಲ್ಲಿದೆ ಎಂದರೆ ಸರಿ . ಅಂತಿಮ ವರದಿಯೊಡನೆ

ಹಾಜರುಪಡಿಸಿರುವ ಟಿಕೆಟ್ ನಲ್ಲಿ ಹೊಸಹಳ್ಳಿ ಕ್ರಾಸ್ ನಲ್ಲಿ ಅದನ್ನು ಬೆಳಗ್ಗೆ 6.46.21 ಸಮಯಕ್ಕೆ ನೀಡಲಾಗಿದೆ , ಆದುದರಿಂದ ಮೇಲೆ ಹೇಳಿದಂತೆ ಹೊಸಹಳ್ಳಿಯಿಂದ ಗೋಪಾಲಪುರ ಗೇಟ್‌ಗೆ ಮೂರುವರೆ ಕಿಲೋ ಮೀಟರ್ ಇರುವ ಕಾರಣ ಬಸ್ಸು ಅತಿವೇಗವಾಗಿ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿಯು ತಾಂತ್ರಿಕ ದೋಷದಿಂದ ಕೆಲವು ಸಮಯ ಟಿಕೆಟ್ ನಲ್ಲಿ ಆ ರೀತಿ ಸಮಯ ಬರುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ . ಬಸ್ಸಿನ ಪ್ರಯಾಣಿಕರ ಹೇಳಿಕೆ ಪಡೆದಿದ್ದೀರಾ ಎಂದರೆ ಸಾಕ್ಷಿಯು ನಿರ್ವಾಹಕರ ಹೇಳಿಕೆ

ಪಡೆದಿದ್ದೇನೆ ಎಂದು ತಿಳಿಸಿದ್ದಾರೆ . ಯಾವುದೇ ದಾಖಲೆಯಲ್ಲಿಯೂ ಗುಬ್ಬಿಯಿಂದ ಕಡೆಯಿಂದ ಬರುತ್ತಿದ್ದ ಬಸ್ಸು ರಸ್ತೆಯ ಯಾವ ಭಾಗದಲ್ಲಿ ಬರುತ್ತಿತ್ತು ಎಂಬ ಬಗ್ಗೆ ನಿಖರವಾಗಿ ನಮೂದಿಸಿಲ್ಲ ಎಂದರೆ ಸರಿ . ಗೋಪಾಲಪುರ ಗೇಟ್ ನಿಂದ ಗುಬ್ಬಿ ಕಡೆಗೆ ಬರುವಾಗ ರಸ್ತೆ ಇಳಿಮುಖವಾಗಿದೆ ಎಂದರೆ ಸರಿ .

ನಾನು ಹೇಳುವಂತೆ ಚಾಸಾ -3 ರಿಂದ 5 ರವರ ಹೇಳಿಕೆ ಪಡೆದಿಲ್ಲ , ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಪ್ರಕರಣಕ್ಕೆ ಅನುಕೂಲವಾಗಲೆಂದು ನಿಪಿ -3 ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಚಾಸಾ -6 ರವರಿಗೆ ಐ ಎಂ ವಿ ಕಾಯ್ದೆ 133 ರಡಿಯಲ್ಲಿ ಯಾವುದೆ ನೋಟಿಸ್ ನೀಡಿಲ್ಲ , ನೋಟಿಸ್ ನ್ನು ನಾನೇ ಪ್ರಕರಣಕ್ಕೆ ಪೂರಕವಾಗಿ ತಯಾರಿಸಿ ಕೇವಲ ಅವರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ . ಚಾಸಾ -2 ರವರ ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಗುಬ್ಬಿ ಸರ್ಕಾರಿ ಆಸ್ಪತ್ರೆಯ ಡಾ. ಪ್ರಿಯದರ್ಶಿನಿ ವೈದ್ಯರಿಂದ ಚಾಸಾ -2 ರವರ ಗಾಯದ ಪ್ರಮಾಣ ಪತ್ರ ಪಡೆದುಕೊಂಡಿದ್ದೇನೆ . ಸಾಕ್ಷಿಯು ಸ್ವತಃ ಮುಂದುವರೆದು ಡಾ. ಸವಿತಾ ರವರಿಂದ ಪಡೆದುಕೊಂಡಿದ್ದೇನೆ ಎಂದು ತಿಳಿಸಿದ್ದಾರೆ . ಚಾಸಾ -2 ರವರು ಕೆಲಸಕ್ಕೆ ಹೋಗಲು ತಡವಾಗುತ್ತಿದೆ ಎಂಬ ಕಾರಣಕ್ಕೆ ದ್ವಿ ಚಕ್ರವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ರಸ್ತೆ ಡುಬ್ಬವನ್ನು ಹತ್ತಿಸಿ ಬಿದ್ದು ಅಪಘಾತ ಮಾಡಿಕೊಂಡಿದ್ದಾರೆ , ಅವರಿಗೆ ಮತ್ತು ಅವರ ಕುಟುಂಬದವರಿಗೆ ಪರಿಹಾರ ದೊರೆಯಲಿ ಎಂದು ಆರೋಪಿತರು ವಿರುದ್ದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಚಾಸಾ -2 ರವರು ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿಲ್ಲ ಕಾರಣ ಅವರು ಹಾಜರುಪಡಿಸಿಲ್ಲ . ಚಾಸಾ -2 ರವರಿಗೆ ವಾಹನ ಚಲಾಯಿಸಲು ಪರವಾನಗಿ ಇರಲಿಲ್ಲ ಮತ್ತು ವಾಹನಕ್ಕೆ ವಿಮೆ ಇರಲಿಲ್ಲ ಎಂಬ ಕಾರಣಕ್ಕೆ ಅವರ ವಿರುದ್ದ ದೋಷಾರೋಪಣಾ ಪಟ್ಟಿ ಯನ್ನು ಸಲ್ಲಿಸಿಲ್ಲ . ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.